**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ನ್ಯಾಯಾಲಯ, ಹುಣಸೂರು**

# PCR 78/2025

| | | |
|---|---|---|
| ಸಾಕ್ಷಿಯ ಹೆಸರು | ಃ ಲಕ್ಷ್ಮೀ | ಪಿ. ಡಬ್ಲ್ಯೂ 1 |
| ತಂದೆ/ಗಂಡನ ಹೆಸರು | ಃ ಮಂಚನಾಯಕ | |
| ವಯಸ್ಸು | ಃ40 ವರ್ಷ | |
| ವೃತ್ತಿ | ಃ ಗೃಹಿಣಿ | |
| ವಾಸಸ್ಥಳ | ಃ ಮಂಚಬಾಯನ ಹಳ್ಳಿ | |

**ಸಾಕ್ಷಿಗೆ ದಿನಾಂಕ 10.08.2026 ರಂದು ಪ್ರಮಾಣ ವಚನ ನೀಡಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿದ**

1 ನೇ ಆರೋಪಿ ನನ್ನ ತಂದೆ ಯಾಗಿರುತ್ತಾರೆ. ನಾನು ಎಲೆಕ್ಟ್ರಿಕಲ್ ವಿದ್ಯಾಭ್ಯಾಸ ಮುಗಿಸಿ, ಕೆ ಆರ್ ನಗರದ ಪ್ರವರ್ತನಾ ಐ ಟಿ ಐ ಕಾಲೇಜಿನಲ್ಲಿ ತಾತ್ಕಾಲಿಕ ಉಪನ್ಯಾಸಾಕಿಯಾಗಿ ಕೆಲಸ ಮಾಡುತ್ತಿದ್ದೇನು. ಸದರಿ ಕಾಲೆಜು ಮಂದುವರೆಯದ ಕಾರಣ ನನ್ನ ಕೆಲಸ ನಿಂತು ಹೋಗಿರುತ್ತದೆ. ಆಗ ನನಗೆ 28-30 ವರ್ಷ ಸಯಸ್ಸಾಗಿತ್ತು. ನಾನು 8 ವರ್ಷಗಳ ಕಾಲ ಮನೆಯಲ್ಲಿಯೇ ವಾಸವಾಗಿದ್ದೇನು. ನನಗೆ 35 ವರ್ಷ ಆಗುವ ವರೆಗೂ ಸಹ ನಾನು ನನ್ನ ತಂದೆ ಮನೆಯಲ್ಲಿಯೇ ಇದ್ದೇನು ನನ್ನ ತಂದೆ 1 ನೇ ಆರೋಪಿ ನನ್ನನ್ನು ಮಗಳು ಎಂದು ಪರಿಗಣಿಸದೇ ನನ್ನ ಮದುವೆಯನ್ನು ಮಾಡದೇ ಬಾಯಿಗೆ ಬಂಂದತೆ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದರು ನನ್ನ ಮದುವೆ ಮಾಡಿದರೇ ಹೇಚ್ಚು ಖರ್ಚಾಗುತ್ತದೆ ಎಂದು ಬಂದ ವರವನ್ನು ಉದ್ದೇಶಪೂರ್ವಕಾಗಿ ವಾಪಸ್ಸು

ಕಳುಹಿಸುತ್ತಿದ್ದರು. ನನ್ನ ಮದುವೆಗೆ ಇಟ್ಟಿದ್ದ ಹಣವನ್ನು ಕೊಡಿಟ್ಟು ಕೊಂಡು ಜಮೀನು ಖರೀದಿಸುವುದು ಮನೆ ಕಟ್ಟುವುದು ಮಾಡುತ್ತಿದ್ದರು. ನನ್ನ ತಂದೆ ಹಾಗೂ ತಾಯಿ ಸದಾ ನನ್ನನ್ನು ಅವಾಚ್ಯ ಶಬ್ದಗಳಿಂದ ನಿಂದಿಸುವುದು, ಹಾಗೂ ನಿನ್ನನ್ನು ಮದುವೆ ಮಾಡಿ ಕೊಡುವುದಿಲ್ಲ ನೀನು ಯಾರನ್ನಾದರೂ ಪ್ರೀತಿಸಿ ಮನೆಯಿಂದ ಹೊರಟು ಹೊಗು ಎಂದು ಹಿಂಸಿಸುತ್ತಿದ್ದರು. ನಾನು ಮನೆಯಲ್ಲಿ ಅಡುಗೆ ಮಾಡುವಾಗ ಕಾದ ಎಣ್ಣೆಯನ್ನು ನನ್ನ ಮೇಲೆ ಸುರಿದಿರುತ್ತಾರೆ. ಆಗ ನನ್ನ ತೊಡೆ ಹಾಗೂ ಕೈಗಳಿಗೆ ಗಾಯ ಆಗಿರುತ್ತದೆ, ನಾನು ಕೆ ಆರ್ ನಗರದ ಸರ್ಕಾರಿ ಆಸ್ಪತ್ರೆಯಲ್ಲಿ ನನ್ನ ಬಾವ ರವಿ ಕುಮಾರ ರವರು ನನಗೆ ಚಿಕಿತ್ಸೆ ಕೊಡಿಸಿರುತ್ತಾರೆ.

ದಿನಾಂಕ 20.12.2018 ರಂದು ಗುರುವಾರ ಬೆಳಿಗ್ಗೆ ನಾನು ಸ್ನಾನ ಮುಗಿಸಿ ಹೊರಗೆ ನಿಂತಿದಾದಗ 1 ಮತ್ತು 5 ನೇ ಆರೋಪಿತರು ಪಕ್ಕದ ಕೊಟ್ಟಿಗೆಯಲ್ಲಿ ನನ್ನ ಮದುವೆ ವಿಚಾರವಾಗಿ ಮಾತನಾಡುತ್ತಾ ಹೆಣ್ಣು ಮಕ್ಕಳ ಮದುವೆ ಮಾಡಿದರೆ ಹೆಚ್ಚು ಖರ್ಚಾಗುತ್ತದೆ ಎಂದು ನನಗಿಂದ ಚಿಕ್ಕವನಾದ ನನ್ನ ತಮ್ಮನ ಮದುವೆ ತಯಾರಿ ನಡೆಸುತ್ತಿದ್ದರು ಅದನ್ನು ಖಂಡಿಸಿ ನಾನು 5 ನೇ ಆರೋಪಿಯನ್ನು ಮನೆಯಿಂದ ಹೊರಗೆ ಹೊಗುವಂತೆ ಹೇಳಿದಾಗ 1 ಮತ್ತು 5 ನೇ ಆರೋಪಿತರು ನನನ್ನು ಧನ ಪಿಶಾಚಿ ಎಂದು ನಿಂದಿಸಿ 1 ನೇ ಆರೋಪಿ ಆರ್ಬಟಿಸುತ್ತಾ ದೊಣ್ಣೆಯಿಂದ ನನಗೆ ತಳಿಸಿರುತ್ತಾರೆ. ನಂತರ ನನ್ನನ್ನು ಗ್ರಾಮದಿಂದ ಬಹಿಷ್ಕರಿಸಿರುತ್ತಾರೆ. ನಮ್ಮ ಮನೆಯ ಮುಂದಿನ ಗಲ್ಲಿಯಲ್ಲಿ ಖಾಲಿ ಮನೆ ಇದ್ದು ಈ ಮನೆಯಲ್ಲಿ 2 ಹಾಗೂ ಇತರೆ ಆರೋಪಿತರು ಸದಾ ಮದ್ಯಪಾನ

ಮಾಡಿ ಕುಡಿದು ನಿನಗೆ ಸರಿಯಾದ ಸಮವನ್ನು ನೋಡಿ ನನ್ನನ್ನು ಕೊಲೆ ಮಾಡಲು ಹೊಂಚು ಹಾಕುತ್ತಿದ್ದರು 1 ನೇ ಆರೋಪಿ ನನ್ನ ತಂದೆ ಗ್ರಾಮದ ಪುಜಾರಿ ಆಗಿದ್ದು 5 ನೇ ಆರೋಪಿ ಗ್ರಾಮದ ದೊಡ್ಡ ಯಜಮಾನರಾಗಿರುತ್ತಾರೆ. ಆರೋಪಿತರೆಲ್ಲರು ಊರಿನಲ್ಲಿ ನ್ಯಾಯ ಪಂಚಾಯಿತಿ ಮಾಡಿ, ಗ್ರಾಮದಲ್ಲಿ ಯಾರು ಸಹ ನನ್ನನ್ನು ಮಾತನಾಡಿಸದಂತೆ ಬಹಿಷ್ಕಾರ ಹಾಕಿರುತ್ತಾರೆ.

ದಿನಾಂಕ 04.03.2020 ರಂದು ನನ್ನ ತಮ್ಮ ನನ್ನು ಮದುವೆ ಮಾಡುವ ಸಲುವಾಗಿ ಹುಡುಗಿ ಮನೆಯವರು ಬಂದಾಗ ನಾನು ಹುಡುಗಿ ಮನೆಯವರಿಗೆ ಮದುವೆಯಾಗದೇ ಇರುವ ವಿಚಾರ ಹೇಳಿದಾಗ 9 ರಿಂದ 12 ನೇ ಆರೋಪಿತರು ನನ್ನ ಜೊತೆ ಜಗಳ ಮಾಡಿ, 10 ನೇ ಆರೋಪಿ ನನ್ನ ಕುತ್ತಿಗೆ ಹಿಡಿದು ಸಾಯಿಸಲು ಬಂದಿರುತ್ತಾರೆ, 9 ನೇ ಆರೋಪಿ ನೀರಿನ ಚೆಂಬುನಿಂದ ನನ್ನ ತಲೆಗೆ ಕಿವಿಗೆ ಮುಖಕ್ಕೆ ಹಲ್ಲೆ ಮಾಡಿರುತ್ತಾರೆ. 11 ಮತ್ತು 12 ನೇ ಆರೋಪಿತರು ನನ್ನ ತಲೆ ಹಿಡಿದು ಎಳೆದಾಡಿ ನೆಲಕ್ಕೆ ಬಿಳಿಸಿ ಪ್ರಜ್ಞೆ ತಪ್ಪಿ ಹೋಗಿರುತ್ತದೆ ನಾನು ಎಚ್ಚರವಾಗಿ ನೋಡಿದಾಗ ಮನೆಯಲ್ಲಿ ಯಾರು ಇಹ ಇರಲಿಲ್ಲ ಈ ರೀತಿಯಾಗಿ ಆರೋಪಿತರು ನನಗೆ ಹಿಂಸೆ ಕೊಡುತ್ತಿದ್ದರು.

ದಿನಾಕ 25.03.2020 ರಂದು ನಾನು ಬೆಳಿಗ್ಗೆ 07.00 ಗಂಟೆಗೆ ನೀರು ಹಿಡಿಯಲು ಬಾಗಿಲು ತೆಗೆದಾಗ 2 ರಿಂದ 4 ನೇ ಆರೋಪಿತರು ಮನೆಗೆ ನುಗ್ಗಿ ಸಿಲಿಂಡರ್ ಗ್ಯಾಸ ಅಕ್ಕಿ ಮನೆಯಲ್ಲಿ ಇಟ್ಟಿದ್ದ ಎಲ್ಲವನ್ನು ತೆಗೆದುಕೊಂಡು ಹೋಗಿ ಇನ್ನೊಂದು

ಕೊನೆಯಲ್ಲಿ ಇಟ್ಟು ಸೀಮೆ ಎಣ್ಣೆ ತಂದರು ನಾನು ಇದನ್ನೆಲ್ಲಾ ನೋಡಿ ತಡೆಯಲು ಪ್ರಯತ್ನಿಸಿದಾಗ ನಾನು ಪೋಲಿಸರಿಗೆ ಜಿಯೋ ಬೆಸಿಕ ಫೊನ್ ನಿಂದ ಕರೆ ಮಾಡಲು ಪ್ರಯತ್ನಿಸಿದಾಗ ನನ್ನ ಫೊನ್ ನ್ನು ಕಿತ್ತುಕೊಂಡಿರುತ್ತಾರೆ. 1 ನೇ ಆರೋಪಿ ಹೊರಗೆ ನಿಂತಿ ಅವಳ ಮೇಲೆ ಸಿಮೇಎಣ್ಣಿ ಸುರಿದು ಒಳಗೆ ಕೂಡಿ ಹಾಕಿ ಬೆಂಕಿ ಹಚ್ಚಿ ಎಂದು ಹೇಳಿರುತ್ತಾರೆ. ನಂತರ ನಾನು ಜೂರಾಗಿ ಕಿರುಚಿಕೊಂಡು ಇದನ್ನು ನೋಡಿ ಓಡಿ ಹೋಗಿರುತ್ತೇನೆ. ಆಗ ನನ್ನ ಬಟ್ಟೆಯನ್ನು ಹರಿದು ಹಾಕಿರುತ್ತಾರೆ, ನಂತರ ನಾನು ಬೇರೆ ಬಟ್ಟೆ ಬದಲಿಸಿ ಆತ್ಮ ಹತ್ಯೆ ಮಾಡಿಕೊಳ್ಳಲು ಕೆರಯ ಹತ್ತಿರ ಓಡಿ ಹೋಗಿರುತ್ತೇನೆ ಅದರೂ ಸಹ ಯಾರು ನನ್ನ ಸಹಾಯಕ್ಕೆ ಬಂದಿಲ್ಲ ನಾನು ಒಡಿ ಹೋಗುವಾಗ ಆರೋಪಿತರು ನನ್ನ ನ್ನು ಬೈ ಕಿನಲ್ಲಿ ಬೆನ್ನಟ್ಟಿ ಬಂದಿರುತ್ತಾರೆ. ನಾನು ರಸ್ತೆಯಲ್ಲಿ ಹೊಗುತ್ತಿದ್ದ ವ್ಯಕ್ತಿಯಿಂದ ಫೊನ್ ಪಡೆದು ನನ್ನ ಬಾವನಿಗೆ ವಿಚಾರವನ್ನು ತಿಳಿಸಿರುತ್ತೇನೆ. ನಂತರ ನನ್ನ ತಂದೆಯ ವಿರುದ್ದ ಪಂಗಡದವರಾದ ಕವೆರಮ್ಮ ಹಾಗೂ ಜಯಮ್ಮ ರವರು ಬಂದು ಸಮಾನದಾನ ಪಡಿಸಿರುತ್ತಾರೆ. ½ ಗಂಟೆ ನಂತರ ನನ್ನ ಬಾವ ಸ್ದಳಕ್ಕೆ ಬಂದು ನನ್ನನ್ನು ಅವರ ಮನೆಗೆ ಕರೆದುಕೊಂಡು ಹೊಗುತ್ತಿದ್ದಾಗ ಆರೋಪಿತರು ನನ್ನ ಹಾಗೂ ನ್ನ ಬಾವನ ಮೆಲೆ ಹಲ್ಲೆ ಮಾಡಿರುತ್ತಾರೆ, ನಂತರ ನನ್ನ ಬಾವ ಕೊವಿಡ್ ಸಮಯವಾಗಿದ್ದರಿಂದ ದೂರು ನೀಡಿದೇ ಅವರ ಮನೆಗೆ ಕರೇದುಕೊಂಡು ಹೋಗಿರುತ್ತಾರೆ. ಆರೋಪಿ 4 ಬಾರಿ ನನ್ನನ್ನು ಕೊಲೆ ಮಾಡಲು ಪ್ರಯತ್ನ ಮಾಡಿರುತ್ತಾರೆ. ಆಸ್ತಿಯಲ್ಲಿ ನನಗೆ ಪಾಲು ನೀಡಬಾರದು ಎಂದು ಗಂಡು ಮಗನಿಗೆ ಖಾತೆ ಬದಲಾವಣೆ ಮಾಡಿರುತ್ತಾರೆ.

1 ನೇ ಆರೋಪಿ ತನ್ನ ಹೆಸರಿನಲ್ಲಿರುವ ಆಸ್ತಿಗಳನ್ನು ನನ್ನ ಸಹೋದರನಿಗೆ ಬದಲಾಯಿಸಿರುತ್ತಾರೆ. ಆರೋಪಿತರೆಲ್ಲರೂ ನನ್ನನ್ನು ಕೊಲೆ ಮಾಡಬೇಕು ಎಂದು ಸಂಚು ರೂಪಿಸಿರುತ್ತಾರೆ. ನನ್ನ ತಂದೆ ಕೆ ಆರ್ನಗರದ ಗ್ರಾಮದಲ್ಲಿ ಪೂಜಾರಿಯಾಗಿದ್ದು, ಸಿನೆಮಾ ವಿಕ್ಷಣೆ ಮಾಡುತ್ತಿದ್ದು ಸಿನೆಮಾದಲ್ಲಿ ಬರುವ ಕೆಟ್ಟ ದೃಶ್ಯಗಳ ಬರೆದು ನನಗೆ ತಂದು ತೋರಿಸಿ ಇದನ್ನು ನೋಡಿಕೊ ಉಪಯೆಗುವಾಗುತ್ತದೆ ಎಂದು ಹೇಳುತ್ತಿದ್ದರು. ನನ್ನ ತಂದೆ 1 ನೇ ಆರೋಪಿ ಕೆಟ್ಟ ಹವ್ಯಾಸಗಳಿಂದ ನಾನು ಬೆಸತ್ತು ಸದರಿ ವಿಚಾರಗಳನ್ನು ಯಾರಿಗೂ ಹೇಳದೆ ಸಹಿಸಿಕೊಂಡು ಹೋಗಿರುತ್ತೇನೆ. 1 ನೇ ಆರೋಪಿ ನನ್ನ ತಂದೆಯಾಗಿದ್ದರು ಸಹ ನನ್ನನನ್ನು ಮಗಳಂತೆ ನಡೆಸಿಕೊಳ್ಳದೇ ನನಗೆ ಮಾನಸಿಕ ಹಾಗೂ ದೈಹಿಕ ವಾಗಿ ಹಿಂಸೆ ನೀಡಿರುತ್ತಾರೆ. ನನ್ನ ಅಕ್ಕನನ್ನು ಮಂಚಬಾಯನಹಳ್ಳಿ ಗ್ರಾಮದ ಚೊಟಾ ಸಾಬ್ ರವರು ಮದುವೆ ಮಾಡಿಸಿದ್ದು, ಅವರ ಪರಿಚಯ ನನಗೆ ಇರುತ್ತದೆ. ಆರೋಪಿತರು ನನ್ನನ್ನು ಮನೆಯಿಂದ ಆಚೆ ಹಾಕಿದಾಗ ನಾನುಚೊಟಾ ಸಾಬ್ ರವರ ಮೂಲಕ ಅಕ್ಬರ ಮನೆಯನ್ನು ಬಾಡಿಗೆ ಪಡೆದುಕೊಂಡಿರುತ್ತೇನೆ. 5 ನೇ ಆರೋಪಿ ಏಕೆ ಮನೆ ಬಾಡಿಗೆ ಕೊಡಿಸಿದ್ದಿರಾ ಎಂದು ಚೊಟಾ ಸಾಬ್ ರವರನ್ನು ಅಡ್ಡ ಗಟ್ಟಿ ಬೆದರಿಕೆ ಹಾಕಿರುತ್ತಾರೆ. ನಂತರ ಚೊಟಾ ಸಾಬ್ ರವರು ಬಾಡಿಗ ಮನೆಯನ್ನು ಬಿಡಿಸಿ ತಮ್ಮ ತೊಟದಲ್ಲಿ ಇರುವ ಮನೆಯನ್ನು ನನಗೆ ಕೊಟ್ಟಿರುತ್ತಾರೆ. ಗ್ರಾಮದ ಯಜಮಾನರು ಅವರಿಗೆ ತೊಂದರೆ ನೀಡುತ್ತಿದ್ದರಿಂದ ನನ್ನನ್ನು ಅಲ್ಲಿಂದ ಖಾಲಿ ಮಾಡಿ ಹೊಗುವಂತೆ ತಿಳಿಸಿರುತ್ತಾರೆ. ನಮ್ಮ ಮನೆಯ ಮೂಲ ಸೌಕರ್ಯಗಳನ್ನು ಸಹ ಕಡಿತ ಗೊಳಿಸಿರುತ್ತಾರೆ.

ನನಗೆ ಎಲ್ಲಿಯೂ ಸಹ ನೆಲೆ ಇಲ್ಲದ್ದರಿಂದ ಗ್ರಾಮದ ಯಜಮಾನರಾದ ತಮ್ಮ ನಾಯಕ ರವರ ಮನೆ ಕೇಳಿದಾಗ ಅವರು ನನ್ನ ತಂದೆಯ ಭಯದಿಂದ ಮನೆ ಕೊಡದೇ ಪಕ್ಕದ ಗ್ರಾಮದಲ್ಲಿ ಮನೆ ಕುಡಿಸುತ್ತೇನೆ ಎಂದು ಹೇಳಿದರೂ ಗ್ರಾಮದ ಮುಂಖಡರಾದ ದೇವರಾಜು ರವರು ಸಹ ನಮ್ಮ ತಂದೆಯ ಭಯದಿಂದ ನನಗೆ ಮನೆ ಕೊಡಲಿಲ್ಲ.

ನನ್ನ ಅಕ್ಕ ಮೈಸೂರಿನಲ್ಲಿ ಐ ಟಿ ಐ ಮುಗಿಸಿ ಕಂಪನಿಯಲ್ಲಿ ತಾತ್ಕಾಲಿಕ ವಾಗಿ ಕೆಲಸ ಮಾಡುತ್ತಿದ್ದರು ಆ ಸಮಯದಲ್ಲಿ ನಾನು ದ್ವಿತಿಯ ಪಿಯು ಸಿ ಓದುತ್ತಿದ್ದೆನು ಆ ಸಮಯದಲ್ಲಿ ನನ್ನನ್ನು ವಿದ್ಯಾಬ್ಯಾಸ ಬಿಡಿಸಿ ತಂಬಾಕು ಬೆಳೆ ಬೆಳೆಯಲು ಕಳುಹಿಸುತ್ತಿದ್ದರು, ನಾನು ಹಗಲು ರಾತ್ರಿ ತಂಬಾಕು ಬೆಳೆಯವುದು, ಬಿಡಿಸುವುದ, ಬ್ಯಾರೆನ್ ನಡೆಸುವ ಕೆಲಸ ಮಾಡುತ್ತಿದ್ದೇನು ಆಗ ನನ್ನ ತಮ್ಮಂದಿರು 7 -8 ತರಗತಿಯಲ್ಲಿ ಓದುತ್ತಿದ್ದರು. ನನ್ನ ಅಕ್ಕನ ಮದುವೆಯನ್ನು ನನ್ನ ತಂದೆ ಹೆಚ್ಚು ಖರ್ಚಾಗುತ್ತದೆ ಎಂದು ಮಾಡದೇ ಇದ್ದಾಗ ನನ್ನ ಬಾವ ಹಣ ನೀಡಿ ಮದುವೆ ಮಾಡಿಕೊಂಡಿರುತ್ತಾರೆ. ನನ್ನನ್ನು ಮದುವೆಗೆ ನೊಡಲು ಬಂದ ಯಾವ ವರವು ಸಹ ತಿರಸ್ಕಾರ ಮಾಡಿಲ್ಲ ನಾನು ಸಹ ಯಾರನ್ನು ತಿರಸ್ಕಾರ ಮಾಡಿರಲಿಲ್ಲ ಆರೋಪಿತರು ನೀಡಿರುವ ಹಿಂಸೆಯನ್ನು ಸಹಿಸಲಾರದೇ ನಾನು ಸಹ ಮದುವೆ ಮಾಡಿಕೊಂಡು ಹೋಗಬೇಕು ಎಂದು ಇಚ್ಚೆ ಪಟ್ಟಿದೇನು ಆದರೆ ಆರೋಪಿತರು ದೇವರ ನೆಪ ಮಾಡಿ ದೇವರು ಒಪ್ಪಲಿಲ್ಲ ಮದುವೆ ತಿರಸ್ಕರಿಸುತ್ತಿದ್ದರು,. ಆರೋಪಿತರು ಸುಮಾರು 7 -8 ವರ್ಷಗಳ ವರೆಗೆ ನನಗೆ ಹಿಂಸೆ ನೀಡುತ್ತಿದ್ದು ನಾನು ಸಂಬಂಧಪಟ್ಟ ಪೋಲಿಸ ಠಾಣೆಯಲ್ಲಿ

ದೂರು ನೀಡಿರುತ್ತೇನೆ, ದಿನಾಂಕ 22.11.2024 ರಂದು ಪೋಲಿಸ ಅಧಿಕ್ಷಕರಿಗೂ ಸಹ ನಾನು ದೂರನ್ನು ನೀಡಿರುತ್ತೇನೆ, ಆರೋಪಿತರು ಆರ್ಥಿಕ ಹಾಗೂ ರಾಜಕೀಯವಾಗಿ ಪ್ರಬಲ ರಾಗಿದದ್ದರಿಂದ ನನ್ನ ದೂರನ್ನು ದಾಖಲಿಸಲು ಪೋಲಿಸರು ನಿರಾಕರಿಸಿರುತ್ತಾರೆ. ಸದರಿ ಘಟನೆಗಳು ಕೊವಿಡ್ ಸಮಯದಲ್ಲಿ ಆಗಿದ್ದರಿಂದ ನಾನು ದೂರು ದಾಖಲಿಸಲಿಲ್ಲ. ಆರೋಪಿತರು ಮನೆಯಲ್ಲಿ ಅಲ್ಲದೆ ಸಾರ್ವಜನಿಕವಾಗಿ ಮಾನಸಿಕ ಹಿಂಸೆ ನೀಡುತ್ತಿದ್ದರು.

2 ಪೋಲಿಸ ಸ್ವಿಕೃತಿಗಳನ್ನು ಹಾಜರು ಪಡಿಸಿದ್ದು ನಿಪಿ-1 ಮತ್ತು 2 ಎಂದು ಗುರುತಿಸಲಾಯಿತು.

**ಆದ್ದರಿಂದ ಪಿರ್ಯಾದಿನಲ್ಲಿ ಕೇಳಿರುವಂತೆ ಆರೋಪಿತರ ವಿರುದ್ದ ಪ್ರಕರಣ ದಾಖಲಿಸಿ ಸೂಕ್ತ ರೀತಿಯಲ್ಲಿ ಶಿಕ್ಷಿಸಬೇಕಾಗಿ ಕೇಳಿಕೊಳ್ಳುತ್ತೇನೆ.**

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಸಾ.ಓ.ಹೇ.ಸ.ಒ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ**
**ಹುಣಸೂರು.**